**ಓ.ಎಸ್. ನಂ. 59/2023** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 2.12.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 16.11.2019 ರ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ1 ಎಂದು, ದಿನಾಂಕ 3.10.2022 ರಂದು ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ2 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ3 ಮತ್ತು ನಿಪಿ4 ಎಂದು, ಸದರಿ ನೋಟಿಸು ಪ್ರತಿವಾದಿಯರಿಗೆ ಜಾರಿಯಾಗದೇ ವಾಪಸ್ ಬಂದಿದ್ದು ಅಂಚೆ ಕವರುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಅವುಗಳನ್ನು ನಿಪಿ5 ಮತ್ತು ನಿಪಿ6 ಮತ್ತು ಅದರಲ್ಲಿರುವ ನೋಟಿಸನ್ನು ನಿಪಿ5 ಎ ಮತ್ತು ನಿಪಿ6 ಎ ಎಂದು ಗುರುತಿಸಲಾಯಿತು. ದಿನಾಂಕ 26.12.2022 ರಂದು ನೀಡಿರುವ ಅಂತಿಮ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆ ಜೆರಾಕ್ಸ ಪ್ರತಿಯಾದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ7 ಮತ್ತು ನಿಪಿ8 ಎಂದು, ದಿನಾಂಕ 29.3.2023 ರಂದು ಪ್ರತಿವಾದಿಯರಿಗೆ ನೀಡಿದ ರಿಜಾಯಂಡರ್ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ9 ಎಂದು, ಎರಡು ಅಂಚೆ ರಶೀದಿಯನ್ನು ನಿಪಿ10 ಮತ್ತು ನಿಪಿ11 ಎಂದು, ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ12 ಮತ್ತು ನಿಪಿ13 ಎಂದು, ದಿನಾಂಕ 10.4.2023 ರಂದು ಪ್ರತಿವಾದಿಯರು ನೀಡಿದ ಉತ್ತರವನ್ನು ನಿಪಿ14 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.